# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 5(44)
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 09-12-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಈ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಇತರೆ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಮತ್ತು ಸದರಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಇತರೆ ಸಿಬ್ಬಂದಿ ವರ್ಗಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-ಎ** ರಲ್ಲಿ ಒದಗಿಸಿದೆ. |
| ಆ) | ರಾಜ್ಯದ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಮುಖ ಸಮಸ್ಯೆಗಳಾದ ಪ್ರತಿ ವರ್ಷದ ಕನಿಷ್ಠ ವಿದ್ಯಾರ್ಥಿಗಳ ದಾಖಲಾತಿಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಮಾದರಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಕಡಿಮೆ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ: | • ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ದಾಖಲಾತಿ ಮಿತಿಯನ್ನು ನಿಗದಿಪಡಿಸಿರುವುದಿಲ್ಲ.<br>• ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಕನಿಷ್ಠ ವಿದ್ಯಾರ್ಥಿಗಳ ದಾಖಲಾತಿಯನ್ನು ನಿಗದಿಪಡಿಸಲಾಗಿರುತ್ತದೆ.<br>• ಕಾಲಾನು ಕ್ರಮೇಣವಾಗಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದ್ದಲ್ಲಿ 2006ರ ನಿಯಮದಲ್ಲಿ ಕನಿಷ್ಠ 03 ವರ್ಷದೊಳಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.<br>• 2024ರ ನಿಯಮದಲ್ಲಿ ಕನಿಷ್ಠ 02 ವರ್ಷದೊಳಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>• ಸರ್ಕಾರದ ಅನುದಾನ ಪಡೆಯಬೇಕಾದಲ್ಲಿ ಕನಿಷ್ಠ ವಿದ್ಯಾರ್ಥಿಗಳ ದಾಖಲಾತಿಯನ್ನು ಕಾಪಾಡಿಕೊಳ್ಳುವುದು ಅಗತ್ಯವಾಗಿರುತ್ತದೆ.<br>• ವಿದ್ಯಾರ್ಥಿಗಳ ದಾಖಲಾತಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯು ಸಂಬಂಧಿಸಿದ ಆಡಳಿತ ಮಂಡಳಿಯದ್ದಾಗಿರುತ್ತದೆ. |

| | | |
|---|---|---|
| ಇ) | ಈ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ನೌಕರರುಗಳಲ್ಲಿ ಕಾರ್ಯಭಾರವಿಲ್ಲದ ಎಷ್ಟು ಸಿಬ್ಬಂದಿಗಳನ್ನು ಸರ್ಕಾರ ಕಡ್ಡಾಯ ಸ್ವಯಂ ನಿವೃತ್ತಿ ಹಾಗೂ ವಿಮುಕ್ತಿ ಮಾಡಿದೆ ಕಾರಣಗಳೇನು; | ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಪೈಕಿ ಸರ್ಕಾರದಿಂದ ಕಡ್ಡಾಯ ನಿವೃತ್ತಿ ಮಾಡಿರುವುದಿಲ್ಲ.<br><br>ಉಪನ್ಯಾಸಕರ ಬೋಧನಾ ವಿಷಯದಲ್ಲಿ ಶೂನ್ಯ ದಾಖಲಾತಿ ಮತ್ತು ಸದರಿ ಬೋಧನಾ ವಿಷಯದಲ್ಲಿ ಮೂಲ ಕಾಲೇಜನ್ನು ಹೊರತುಪಡಿಸಿ, ರಾಜ್ಯದ ಬೇರೆ ಯಾವುದೇ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಅನುದಾನಿತ ಹುದ್ದೆ ಲಭ್ಯವಿಲ್ಲದ ಕಾರಣದಿಂದಾಗಿ, ಸೇವೆಯಿಂದ Retrench ಮಾಡಲು ಈ ಮುಂದಿನಂತೆ ನಿಯಮವಿರುತ್ತದೆ:<br><br><u>ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 98 (1)</u><br><br>Where retrenchment of any employee is rendered necessary by the Governing council or competent authority consequent on any change relating to Education or course of instruction or due to any other reason, such retrenchment may be effected with prior approval of the competent authority or the next higher authority, as the case may be.<br><br>The Karnataka Educational Institutions (Recruitment & Terms & Conditions of Service of Employees in Private Aided Primary & Secondary Educational Institutions) Rules, 1999 ನಿಯಮಗಳ ನಿಯಮ 10(1)ರಲ್ಲಿ ಈ ಕೆಳಕಂಡಂತಿರುತ್ತದೆ–<br><br>Retrenchment of Employees (1): An employee in an institution may be retrenched by the Governing Council on the following grounds:<br><br>a) Where the teacher pupil ratio falls below the standard staffing pattern specified in Annexure- IV & V as the case may be. |

| | | |
|---|---|---|
| | | b) Due to changes relating to curriculum or students strength the work load of a teacher in a particular subject does not warrant his continuation in a particular institution.<br><br>ಮೇಲಿನ ನಿಯಮದ ಪ್ರಕಾರ ಹಾಲಿ ಇಲಾಖೆಯಲ್ಲಿ ಈ ಕೆಳಕಂಡ 03 ಉಪನ್ಯಾಸಕರುಗಳನ್ನು ಶೂನ್ಯ ದಾಖಲಾತಿ ಇರುವುದರಿಂದ Retrench ಮಾಡಲಾಗಿದೆ-<br><br>1) ಶ್ರೀಮತಿ ಜ್ಯೋತಿ ಪಾಟೀಲ್, ಗೃಹ ವಿಜ್ಞಾನ ಉಪನ್ಯಾಸಕರು, ಬಂಗೂರುನಗರ ಪದವಿ ಪೂರ್ವ ಕಾಲೇಜು, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ.<br><br>2) ಶ್ರೀ ಮಾದಾರೆಡ್ಡಿ, ತೆಲುಗು ಭಾಷಾ ಉಪನ್ಯಾಸಕರು, ಎಂ.ಇ.ಎಸ್ ಪದವಿ ಪೂರ್ವ ಕಾಲೇಜು, ಬೆಂಗಳೂರು ದಕ್ಷಿಣ ಜಿಲ್ಲೆ.<br><br>ಶ್ರೀ ಕೋಟ್ರೇಗೌಡ, ವಿದ್ಯುನ್ಮಾನಶಾಸ್ತ್ರ ಉಪನ್ಯಾಸಕರು, ಎಂ.ಇ.ಎಸ್ ಪದವಿ ಪೂರ್ವ ಕಾಲೇಜು, ಬೆಂಗಳೂರು ದಕ್ಷಿಣ ಜಿಲ್ಲೆ. |
| ಈ) | ಸದರಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿ ವರ್ಗದವರಿಗೆ ಕಾರ್ಯಭಾರದ ಕೊರತೆ ಇರುವ ಕಾಲೇಜುಗಳ ಎಲ್ಲಾ ವರ್ಗದ ಸಿಬ್ಬಂದಿಗಳನ್ನು ಆಯಾ ಜಿಲ್ಲೆಯ ಅನುದಾನಿತ ಕಾಲೇಜುಗಳು ಅಥವಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರವಿರುವ ಕಾಲೇಜಿಗೆ ನಿಯೋಜನೆ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)(ಶೈಕ್ಷಣಿಕ ಆಡಳಿತ, ನೋಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 27ರ ಉಪ ನಿಯಮ 04ರಲ್ಲಿರುವಂತೆ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು ಆಯಾ ಜಿಲ್ಲೆಯಲ್ಲಿನ ಉಪನ್ಯಾಸಕರ ಕಾರ್ಯಭಾರವನ್ನು ಸರಿದೂಗಿಸಿ ನಿಯೋಜಿಸಲು ಕ್ರಮಕೈಗೊಳ್ಳುತ್ತಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ:ಇಪಿ 10 ಟಿಪಿಯು 2022 ದಿನಾಂಕ:30-09-2023ರಲ್ಲಿ ಕಾರ್ಯಭಾರದ ಕೊರತೆ ಇರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರನ್ನು ಸರ್ಕಾರಿ ಕಾಲೇಜಿಗೆ ನಿಯೋಜಿಸಿ ಕಾರ್ಯಭಾರ ಸರಿದೂಗಿಸಲು ಅವಕಾಶವಿರುವುದಿಲ್ಲವೆಂದು ಆದೇಶಿಸಲಾಗಿದೆ. ಸದರಿ ಆದೇಶದ ಪ್ರತಿಯನ್ನು ಅನುಬಂಧ-ಬಿ ರಲ್ಲಿ ಒದಗಿಸಿದೆ. |

**ಸಂಖ್ಯೆ: ಇಪಿ 413 ಡಿಜಿಡಬ್ಲ್ಯೂ 2024**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ANNEXURE-A FOR 5(44)

DETAILS OF AIDED COLLEGES AND WORKING STAFF

| DISTRICT | COLLEGES | LECTURER | PRINCIPAL | PHYSICAL EDUCATION LECTURER | FDA/SDA | GROUP-D |
|---|---|---|---|---|---|---|
| BENGALURU NORTH | 34 | 149 | 9 | 9 | 21 | 30 |
| BENGALURU SOUTH | 32 | 172 | 9 | 5 | 16 | 28 |
| BENGALURU RURAL | 8 | 43 | 1 | 0 | 5 | 8 |
| RAMANAGARA | 14 | 66 | 1 | 1 | 11 | 4 |
| BELLARY | 19 | 69 | 3 | 5 | 15 | 17 |
| CHIKKODI | 40 | 232 | 15 | 18 | 35 | 45 |
| BELAGAVI | 33 | 219 | 14 | 13 | 30 | 31 |
| BAGALKOT | 31 | 175 | 9 | 5 | 29 | 32 |
| VIJAYAPURA | 54 | 340 | 22 | 18 | 30 | 37 |
| BIDAR | 38 | 190 | 4 | 9 | 34 | 34 |
| DAVANGERE | 32 | 159 | 6 | 10 | 24 | 39 |
| CHITRADURGA | 46 | 243 | 6 | 12 | 29 | 30 |
| CHIKKAMANGLUR | 15 | 69 | 8 | 6 | 12 | 14 |
| GADAGA | 25 | 147 | 9 | 11 | 20 | 29 |
| HAVERI | 41 | 197 | 26 | 12 | 28 | 23 |
| DHARAWADA | 31 | 165 | 0 | 10 | 10 | 9 |
| KALABURGI | 27 | 122 | 4 | 4 | 26 | 44 |
| YADGIR | 5 | 40 | 0 | 0 | 2 | 2 |
| HASSAN | 23 | 112 | 8 | 2 | 22 | 29 |
| CHIKKABALLAPUR | 8 | 42 | 1 | 0 | 4 | 7 |
| KOLAR | 11 | 59 | 2 | 0 | 8 | 11 |
| CHAMARAJANAGARA | 6 | 22 | 0 | 1 | 6 | 5 |
| MYSORE | 25 | 112 | 6 | 9 | 17 | 16 |
| MANDYA | 21 | 97 | 7 | 4 | 11 | 14 |
| UTTARA KANNADA | 23 | 132 | 15 | 5 | 17 | 6 |
| KOPPALA | 8 | 41 | 6 | 4 | 4 | 5 |
| RAICHUR | 7 | 18 | 0 | 2 | 5 | 4 |
| MANGALURU | 31 | 173 | 13 | 17 | 24 | 16 |
| UDUPI | 14 | 101 | 9 | 8 | 13 | 35 |
| SHIVAMMOGGA | 22 | 115 | 6 | 3 | 21 | 10 |
| TUMKURU | 83 | 298 | 23 | 18 | 58 | 91 |
| KODAGU | 13 | 43 | 5 | 5 | 5 | 3 |
| TOTAL | 820 | 4162 | 247 | 226 | 592 | 708 |

DIRECTOR
DEPT OF SCHOOL
EDUCATION
(PREUNIVERSITY)

ಕರ್ನಾಟಕ ಸರ್ಕಾರದ ನಡವಳಿಗಳು

ಅನುಬಂಧ-2 5(44)

ವಿಷಯ:- ಕಾರ್ಯಭಾರದ ಕೊರತೆ ಇರುವ ಅನುದಾನಿತ ಉಪನ್ಯಾಸಕರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಉಪನ್ಯಾಸಕರ ಹುದ್ದೆಗೆ ನಿಯೋಜಿಸಿ ಕಾರ್ಯಭಾರ ಸರಿದೂಗಿಸಲು ಹೊರಡಿಸಿರುವ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ:ಇಡಿ 18 ಟಿಪಿಯು 2018 ದಿನಾಂಕ:17-05-2018.

2) ಸರ್ಕಾರದ ಆದೇಶ ಸಂಖ್ಯೆ:ಇಡಿ 18 ಟಿಪಿಯು 2018 ದಿನಾಂಕ:18-07-2018.

ಪ್ರಸ್ತಾವನೆ:

ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 76 ಟಿಪಿಯು 2012 ದಿನಾಂಕ :23-01-2017ರನ್ವಯ ಅನುದಾನಕ್ಕೆ ಒಳಪಡಿಸಲಾಗಿರುವ ಸರ್ಕಾರದ ಆದೇಶಗಳಲ್ಲಿ ನಿಗದಿತ ಕಾರ್ಯಭಾರ ಇಲ್ಲದಿರುವ ಉಪನ್ಯಾಸಕರಿಗೆ ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿನ ಸಂಬಂಧಿಸಿದ ವಿಷಯದ ಖಾಲಿ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜನೆ ಮಾಡಿ ಕಾರ್ಯಭಾರ ಸರಿದೂಗಿಸಲು ಷರತ್ತು ವಿಧಿಸಲಾಗಿತ್ತು. ಆದರೆ, ನಿಯೋಜಿಸಿರುವ ಅನುದಾನಿತ ಕಾಲೇಜುಗಳು 25 ಕಿ.ಮೀ. ದೂರವಿದ್ದು, ಬೇರೆ ಜಿಲ್ಲೆಗೂ ನಿಯೋಜನೆ ಮಾಡಿರುವುದರಿಂದ ವೇತನ ಬಿಡುಗಡೆಯಾಗಿರುವುದಿಲ್ಲ. ಆದ್ದರಿಂದ ಅನುದಾನಿತ ಕಾಲೇಜಿಗೆ ನಿಯೋಜಿಸಿರುವ ಬದಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿನ ಖಾಲಿ ಹುದ್ದೆಗೆ ನಿಯೋಜಿಸಿ. ವೇತನ ಬಿಡುಗಡೆ ಮಾಡಲು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆದೇಶಿಸಲಾಗಿತ್ತು.

ತದನಂತರ, ಸರ್ಕಾರದ ಆದೇಶ ಸಂಖ್ಯೆ:ಇಡಿ 18 ಟಿಪಿಯು 2018 ದಿನಾಂಕ:17-05-2018ನ್ನು ಪುನರ್ ಪರಿಶೀಲಿಸಿ, ಈ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ಅತಿ ವಿಶೇಷ ಸಂದರ್ಭಗಳಲ್ಲಿ ಹಾಗೂ ಸಮೀಪದಲ್ಲಿ ಯಾವುದೇ ಅನುದಾನಿತ ಕಾಲೇಜಿನಲ್ಲಿ ಸಂಬಂಧಿಸಿದ ಉಪನ್ಯಾಸಕರ ಹುದ್ದೆ ಖಾಲಿ ಇಲ್ಲದಿದ್ದಲ್ಲಿ/ಲಭ್ಯವಿಲ್ಲದಿದ್ದಲ್ಲಿ ಮಾತ್ರ ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಉಪನ್ಯಾಸಕರ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸಿ, ಕಾರ್ಯಭಾರ ಸರಿದೂಗಿಸುವಂತೆ ಮತ್ತು ಈ ರೀತಿ ಕಾರ್ಯಭಾರ ಸರಿದೂಗಿಸುವ ಸಲುವಾಗಿ ಮಾಡಿರುವ ವ್ಯವಸ್ಥೆಗೆ ಕಣ್ಗಾವಲಿರಿಸಿ, ಇಲಾಖಾ ಅಧಿಕಾರಿಗಳಿಂದ ಸೂಕ್ತ ಮೇಲ್ವಿಚಾರಣೆ ಮಾಡುವಂತೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆದೇಶಿಸಲಾಗಿತ್ತು.

ಈ ಬಗ್ಗೆ ನಿಗದಿತ ಕಾರ್ಯಭಾರವಿಲ್ಲದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಅನುದಾನರಹಿತ ಉಪನ್ಯಾಸಕರನ್ನು ಸಮೀಪದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಂಬಂಧಿಸಿದ ವಿಷಯದ ಉಪನ್ಯಾಸಕರ ಖಾಲಿ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸುವ ಮೂಲಕ ಕಾರ್ಯಭಾರ ಸರಿದೂಗಿಸಿ ವೇತನಾನುದಾನಕ್ಕೆ ಒಳಪಡಿಸಲು ಈ ಕೆಳಕಂಡ ಕಾರಣಗಳಿಂದಾಗಿ ಸಾಧ್ಯವಿರುವುದಿಲ್ಲವೆಂದು ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿದೆ-

1. ಪ್ರಥಮದಲ್ಲಿ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಪ್ರಕರಣ 49ರಲ್ಲಿ ಕಲ್ಪಿಸಿರುವ ಉಪಬಂಧದನ್ವಯ ರಾಜ್ಯ ಸರ್ಕಾರವು ತನ್ನ ಆರ್ಥಿಕ ಸಂಪನ್ಮೂಲಗಳ ಮಿತಿಯಲ್ಲಿ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಹಾಯಾನುದಾನ (grant-in-aid) ನೀಡಲು ಅವಕಾಶವಿರುತ್ತದೆ;

2. ಶಿಕ್ಷಣ ಅಧಿನಿಯಮದ ಪ್ರಕರಣ 52ರನ್ವಯ ಸಹಾಯಾನುದಾನದ ಯಾವುದೇ ಷರತ್ತಿನ ಪೂರೈಕೆಯನ್ನು ನಿರಂತರವಾಗಿ ಕಾಯ್ದುಕೊಳ್ಳದಿದ್ದಲ್ಲಿ, ಸಹಾಯಾನುದಾನವನ್ನು ಹಿಂಪಡೆಯುವ ವಿವೇಚನಾಧಿಕಾರ ರಾಜ್ಯ ಸರ್ಕಾರ ಹೊಂದಿದೆ. ಅರ್ಥಾತ್ ಸಹಾಯಾನುದಾನವನ್ನು ಹಕ್ಕೆಂದು ಪ್ರತಿಪಾದಿಸಲು ಅವಕಾಶವಿರುವುದಿಲ್ಲ;

3.ಶಿಕ್ಷಣ ಅಧಿನಿಯಮದಲ್ಲಿನ ಅವಕಾಶದಂತೆ ಖಾಸಗಿ ಶಾಲಾ/ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿನಾಂಕ:06-10-2007ರನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳನ್ನು ಸದರಿ ಆದೇಶದಲ್ಲಿನ ಷರತ್ತುಗಳ ಪೂರೈಕೆಗಳಿಗೊಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸಲು ಅವಕಾಶವಿರುತ್ತದೆ. ಅಂದರೆ, ಸದರಿ ಸಿಬ್ಬಂದಿಗಳ ವೇತನ/ಪಿಂಚಣಿ ಉದ್ದೇಶಕ್ಕೆ ಸಂಬಂಧಿಸಿದಂತೆ ಸರ್ಕಾರದ ಸಹಾಯಾನುದಾನ ನೀಡಲು ಮಾತ್ರ ಆಸ್ಪದವಿರುತ್ತದೆ.

4. ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಿಬ್ಬಂದಿ ಮಾದರಿಯನ್ವಯ ಮಂಜೂರಾಗಿರುವ ಹುದ್ದೆಗಳು ಸರ್ಕಾರದ ಹುದ್ದೆಗಳಲ್ಲ. ಸದರಿ ಹುದ್ದೆಗಳಿಗೆದುರಾಗಿ ನೇಮಕಗೊಳ್ಳುವ ಸಿಬ್ಬಂದಿಯ ನೇಮಕಾತಿ ಪ್ರಾಧಿಕಾರವು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳೇ ಆಗಿದ್ದು, ಸರ್ಕಾರವು ನೇಮಕಾತಿ ಪ್ರಾಧಿಕಾರವಲ್ಲ. ಅಂತೆಯೇ, ಸದರಿ ಸಿಬ್ಬಂದಿಗಳನ್ನು ಸರ್ಕಾರದ ಇಲಾಖೆಗಳ ಹುದ್ದೆಗಳಿಗೆದುರಾಗಿ ನಿಯೋಜಿಸಲು ಅವಕಾಶವಿರುವುದಿಲ್ಲ;

5 Karnataka Pre-University (Academic, Registration, Administration and Grant-in-aid etc.) Rules, 2006 ರ ನಿಯಮ 14(2)ರನ್ವಯ ಖಾಸಗಿ ಪದವಿ ಪೂರ್ವ ಕಾಲೇಜಿನ ಯಾವುದೇ ಉಪನ್ಯಾಸಕ ಹುದ್ದೆಗೆ ಕಾರ್ಯಭಾರದ ಕೊರತೆ ಇದ್ದಲ್ಲಿ, ಅದನ್ನು ಮತ್ತೊಂದು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಹುದ್ದೆಯ ಕಾರ್ಯಭಾರಕ್ಕೆ ಸರಿದೂಗಿಸಲು ಮಾತ್ರ ಅವಕಾಶವಿದ್ದು, ಸರ್ಕಾರಿ ಪದವಿ ಪೂರ್ವ ಕ್ಕಾಲೇಜಿನ ಹುದ್ದೆಯ ಕಾರ್ಯಭಾರಕ್ಕೆ ಸರಿದೂಗಿಸಲು ಅವಕಾಶವಿರುವುದಿಲ್ಲ.

6. ಒಂದು ವೇಳೆ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಿದಲ್ಲಿ, ಸದರಿ ಉಪನ್ಯಾಸಕರು ನಿವೃತ್ತಿ ಹೊಂದುವವರೆಗೂ ಸರ್ಕಾರದ ಹುದ್ದೆಯನ್ನು ಶಾಶ್ವತವಾಗಿ ಭರ್ತಿ ಮಾಡದೇ ಖಾಲಿ ಇರಿಸಬೇಕಾಗುತ್ತದೆ. ಇದು ಪರೋಕ್ಷವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳ ಹುದ್ದೆಗಳನ್ನು ಸರ್ಕಾರದ ವಶಕ್ಕೆ ಪಡೆದಂತಾಗಲಿದ್ದು, ಸಹಾಯಾನುದಾನದ ಮೂಲ ಆಶಯ ಹಾಗೂ ಸರ್ಕಾರದ ನೀತಿಗೆ ವಿರುದ್ಧವಾದ ಕ್ರಮವಾಗುತ್ತದೆ.

ಮೇಲಿನ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ, ನಿಗಧಿತ ಕಾರ್ಯಭಾರವಿಲ್ಲದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಅನುದಾನರಹಿತ ಉಪನ್ಯಾಸಕರನ್ನು ಕಾರ್ಯಭಾರದ ಕೊರತೆ ನೆಪದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ಖಾಲಿ ಹುದ್ದೆಗೆ ನಿಯೋಜಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ ಹಾಗೂ ಈ ವಿಷಯವನ್ನು ಈಗಾಗಲೇ ಆರ್ಥಿಕ ಇಲಾಖೆಯು ಹಲವಾರು ಬಾರಿ ಪರಿಶೀಲಿಸಿದ್ದು, ಕಾನೂನು/ನಿಯಮಗಳಲ್ಲಿ ಅವಕಾಶವಿಲ್ಲದ ಪ್ರಯುಕ್ತ ಇನ್ನು ಮುಂದೆ ಈ ವಿಷಯದ ಕುರಿತಂತೆ ಕಡತ ಸಲ್ಲಿಸದಂತೆ ಆರ್ಥಿಕ ಇಲಾಖೆಯು ತಿಳಿಸಿರುತ್ತಾರೆ.

ಆರ್ಥಿಕ ಇಲಾಖೆಯು ಮೇಲಿನಂತೆ ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಖಾಸಗಿ

ಉಪನ್ಯಾಸಕರನ್ನು ನಿಯಮಗಳ ಅವಕಾಶದನ್ವಯ ಅನುದಾನಿತ ಕಾಲೇಜಿನಲ್ಲಿ ಖಾಲಿ ಇರುವ ಸಂಬಂಧಿಸಿದ ವಿಷಯದ ಅನುದಾನಿತ ಖಾಲಿ ಹುದ್ದೆಗೆ ವಾರದಲ್ಲಿ ಮೂರು ದಿನ ನಿಯೋಜಿಸುವ ಮೂಲಕ ಮಾತ್ರ ಅವಕಾಶವಿದ್ದು, ಯಾವುದೇ ಕಾರಣಕ್ಕೂ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಲು ಅವಕಾಶವಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 10 ಟಿಪಿಯು 2022, ಬೆಂಗಳೂರು, ದಿನಾಂಕ: 30-09-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 18 ಟಿಪಿಯು 2018 ದಿನಾಂಕ:18-07-2018ನ್ನು, ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ಕಾರ್ಯಭಾರದ ಕೊರತೆ ಇರುವ ಅನುದಾನಿತ ಉಪನ್ಯಾಸಕರನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಿ ಕಾರ್ಯಭಾರ ಸರಿದೂಗಿಸಲು ಅವಕಾಶವಿರುವುದಿಲ್ಲವೆಂದು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 146 ವೆಚ್ಚ-8/2022 ದಿನಾಂಕ :19-03-2023ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Padmini S.N
(ಪದ್ಮಿನಿ ಎಸ್.ಎನ್.) 30/9/23
ಸರ್ಕಾರದ ಅಧೀನ ಕಾರ್ಯದರ್ಶಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ,
(ಪದವಿ ಪೂರ್ವ ಶಿಕ್ಷಣ).

ಇವರಿಗೆ:-

1. ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ), ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು.
2. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)(ನಿರ್ದೇಶಕರ ಮೂಲಕ).
3. ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು(ನಿರ್ದೇಶಕರ ಮೂಲಕ).
4. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.